**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ</u>**
**<u>ಕೊಪ್ಪ</u>**

***<u>ಸಿ.ಸಿ. ನಂ.207/2025</u>***

*<u>ಫಿರ್ಯಾದುದಾರರುಃ</u>* ಸರ್ಕಾರದ ಪರವಾಗಿ ಜಯಪುರ ಪೊಲೀಸರು

**ವಿರುದ್ಧ**

| | | |
|---|---|---|
| *ಆರೋಪಿ/ತರುಃ* | 1 | ಕೀರ್ತಿ ಸುಂದರರಾಜ್ ಬಿನ್ ಸುಬ್ಬಣ್ಣ ಕೆ .ಟಿ., 40 ವರ್ಷ, ವ್ಯವಸಾಯ, ವಾಸ ಹೂವಿನಗುಂಡಿ, ಗುಡ್ಡೇತೋಟ ಗ್ರಾಮ, ಕೊಪ್ಪ ತಾಲ್ಲೂಕು. |
| | 2 | ಪ್ರದೀಪ ಬಿನ್ ನಾಗೇಶಗೌಡ, 38 ವರ್ಷ, ವ್ಯವಸಾಯ, ವಾಸ ಕೂಳೂರು ಗ್ರಾಮ, ಕೊಪ್ಪ ತಾಲ್ಲೂಕು. |
| | 3 | ರಾಜೇಂದ್ರ ಬಿನ್ ಚಂದ್ರಶೇಖರ, 32 ವರ್ಷ, ವ್ಯವಸಾಯ, ವಾಸ ಕೂಳೂರು ಗ್ರಾಮ, ಕೊಪ್ಪ ತಾಲ್ಲೂಕು. |
| | 4 | ನವೀನ್ ಬಿನ್ ಮಂಜುನಾಥ, 40 ವರ್ಷ, ವಾಸ ಕೂಳೂರು ಗ್ರಾಮ, ಕೊಪ್ಪ ತಾಲ್ಲೂಕು. |

***ದೋಷಾರೋಪಣೆ***

ಶ್ರೀಮತಿ ಎಂ.ಎನ್. ನಂದಿನಿ, ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ- 24-01-2025 ರಂದು ಮಧ್ಯಾಹ್ನ 12-10 ಗಂಟೆಯ ಸಮಯದಲ್ಲಿ ಜಯಪುರ ಪೊಲೀಸ್ ಠಾಣಾ ಸರಹದ್ದಿನ ಮೇಗುಂದಾ ಹೋಬಳಿ, ಗುಡ್ಡೇತೋಟ ಗ್ರಾಮದಲ್ಲಿರುವ ಭದ್ರಾ ಎಸ್ಟೇಟ್ ಎಲ್ ಬಿ/5 ಫೀಲ್ಡ್ ನಂಬರ್ 13 ರಲ್ಲಿ ಕಾಫೀ ಹಣ್ಣು ಕೊಯ್ಯಲು ಚಾಸಾ.1 ದೇವಯ್ಯರವರು ಚಾಸಾ.8 ರಿಂದ ಚಾಸಾ.12 ರವರೆಗಿನ ಸಿಬ್ಬಂದಿಗಳನ್ನು ಕರೆದುಕೊಂಡು ಕೂಲಿ ಕಾರ್ಮಿಕರುಗಳಿಂದ ಕಾಫೀ ಹಣ್ಣನ್ನು ಕೊಯ್ಯಿಸುತ್ತಿರುವಾಗ 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶವನ್ನು ಹೊಂದಿ, ಏಕಾ ಏಕಿ ಕಾಫಿ ತೋಟಕ್ಕೆ ಹೋಗಿ ಚಾಸಾ.8 ಮತ್ತು ಚಾಸಾ.9 ರವರಿಗೆ ಕೈಯಿಂದ ಹಲ್ಲೆ ಮಾಡಿರುತ್ತೀರಿ. ಇದರಿಂದ ಚಾಸಾ.8 ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಆದ್ದರಿಂದ ನೀವು **ಭಾರತೀಯ ನ್ಯಾಯ ಸಂಹಿತ**

**(ಬಿ.ಎನ್.ಎಸ್.), 2023 ಕಲಂ 115(2) ಸಹ ಕಲಂ 3(5)**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು 1ನೇ ಆರೋಪಿತನು ಕೈಯಲ್ಲಿ ಎಸ್.ಬಿ.ಎಂ.ಎಲ್. ನಾಡ ಬಂದೂಕನ್ನು ಹಿಡಿದು ಕೊಂಡು ಚಾಸಾ.1, ಚಾಸಾ.8 ರಿಂದ ಚಾಸಾ.12 ರವರಿಗೆ ಭಯ ಹುಟ್ಟಿಸಿದ್ದು ಹಾಗೂ 2 ರಿಂದ 4ನೇ ಆರೋಪಿತರು ಚಾಸಾ.1, ಚಾಸಾ.8 ರಿಂದ ಚಾಸಾ.12 ರವರಿಗೆ ಬೆದರಿಕೆ ಹಾಕಿರುತ್ತೀರಿ. ಇದರಿಂದ ನೀವು **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 351(2) ಸಹ ಕಲಂ 3(5)** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, 1 ನೇ ಆರೋಪಿಯಾದ ನೀವು ಚಾಸಾ.13 ಸುಬ್ಬಣ್ಣ ಕೆ.ಟಿ.ರವರ ಹೆಸರಿನಲ್ಲಿರುವ ನಾಡ ಬಂದೂಕು (ಎಸ್.ಬಿ.ಎಂ.ಎಲ್) ಅನ್ನು ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ನಿಮ್ಮ ವಶದಲ್ಲಿ ಇಟ್ಟುಕೊಂಡಿದ್ದೀರಿ. ಆ ಮೂಲಕ ನೀವು **ಭಾರತ ಆಯುದ ಕಾಯ್ದೆ ಕಲಂ *3(1)* ಮತ್ತು *25(1-ಬಿ)*ಎ** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತಿರಿ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ಸಹಿ/- 17.11.2025.
(ಶ್ರೀಮತಿ ಎಂ.ಎನ್. ನಂದಿನಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.

# <u>ದೋಷಾರೋಪಣೆ</u>

ಪ್ರ-1ಃ ಈ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉಃ ಆ-1 ತಿಳಿಯಿತು

ಆ-2 ತಿಳಿಯಿತು

ಆ-3 ತಿಳಿಯಿತು

ಆ-4 ತಿಳಿಯಿತು

ಪ್ರ-2ಃ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ನಿಮಗೆ ಏನಾದರೂ ಪ್ರತಿರಕ್ಷೆ ಇದೆಯೇ?

ಉಃ ಆ-1 ವಿಚಾರಣೆಯಾಗಬೇಕು

ಆ-2 ವಿಚಾರಣೆಯಾಗಬೇಕು

ಆ-3 ವಿಚಾರಣೆಯಾಗಬೇಕು

ಆ-4 ವಿಚಾರಣೆಯಾಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 17.11.2025

ಸಹಿ/- 17.11.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

ಆರೋಪಿತರ ಸಹಿಃ